**O.S. 416-23** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R N D, ವಕೀಲರಿಂದಃ**

19. ನನ್ನ ಮುಖ್ಯ ವಿಚಾರಣೆ ಪ್ಯಾರಾ ನಂಃ 6 ರಲ್ಲಿ ಪ್ರತಿವಾದಿ ನನ್ನ ಬಳಿ ಬಂದು ಭಾಡಿಗೆ ಹಣ ನಿಗದಿತವಾಗಿ ಕೊಡುತ್ತೇನೆಂದು ಸ್ವಾಧೀನವನ್ನು ಕೊಡಲು ಸಮಯ ಕೋರಿರುತ್ತಾನೆ ಅಂತಾ ಕೆಳ ನ್ಯಾಯಾಲಯದಲ್ಲಿ ಹೇಳಿದ್ದು ನೆನಪಿಲ್ಲ. ಕೆಳ ನ್ಯಾಯಾಲಯದಲ್ಲಿ ದಾವೆ ಹಿಂಪಡೆದ ನಂತರ ಪ್ರತಿವಾದಿಗೆ ನೋಟಿಸು ಕೊಟ್ಟಿಲ್ಲ. ಈ ನ್ಯಾಯಾಲಯದಲ್ಲಿ ನಾನು ಹಾಜರಪಡಿಸಿದ ನೋಟಿಸು ಬಿಟ್ಟರೆ ಬೇರೆ ನೋಟಿಸು ಕೊಟ್ಟಿಲ್ಲ. ಪ್ರತಿವಾದಿ ಭಾಡಿಗೆ ಹಣ ಕೊಡಲು ಸಮಯ ಕೋರಿರುತ್ತಾನೆ ಹಾಗೂ ಕಬ್ಜೆ ಕೊಡಲು ಸಮಯವನ್ನು ಯಾರ ಮುಂದೆ ಕೇಳಿದ್ದಾನೆಂದು ಅಂದರೆ ಇಂತಹ ಸಂದರ್ಭ ಬಂದಿಲ್ಲ. ಕೆಳ ನ್ಯಾಯಾಲಯದಲ್ಲಿ ಕೇಸ ಬಾಕಿ ಇದ್ದಾಗ ಜನವರಿ 23 ರಿಂದ ಏಪ್ರಿಲ್ 2023 ವರೆಗೆ ಭಾಡಿಗೆ ಹಣ ಹಾಕಿಲ್ಲ. 1 ಲಕ್ಷ 40 ಸಾವಿರ ರೂ. ಖಾತೆಗೆ ಹಾಕಿದ್ದಾರೆ ನಾವು ತೆಗೆದುಕೊಂಡಿಲ್ಲ. ಹೆಚ್ಚಿನ ಹಣ ಮುಂದುವರೆದ ಭಾಡಿಗೆ ಕರಾರಿಗೆ ಹಣ ಕೊಟ್ಟಿದ್ದರಿಂದ, ನಾನು ಪ್ರತಿವಾದಿ ಬಂದು ಭಾಡಿಗೆ ಹಣ ಕೊಡುತ್ತೇನೆಂದು ಹಾಗೂ ಸ್ವಾಧೀನ ಕೊಡುತ್ತೇನೆಂದು ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲ. ಮೂಲ ಭಾಡಿಗೆದಾರನ ವಾರಸುದಾರರು 1 ಲಕ್ಷ 40 ಸಾವಿರ ರೂ. ಗಳನ್ನು ಹೆಚ್ಚಿನ ಭಾಡಿಗೆ ಹಣ ಖಾತೆ ಮೂಲಕ ತೆಗೆದುಕೊಂಡಿದ್ದರಿಂದ ಭಾಡಿಗೆ ಮುಂದುವರೆಸಲು ಹಕ್ಕುಳ್ಳವರಾಗಿದ್ದಾರೆ ಅಂದರೆ ಸರಿಯಲ್ಲ. ಭಾಡಿಗೆ ಮುಂದುವರೆಸಲು ಹೆಚ್ಚಿನ ಭಾಡಿಗೆ ಹಣ ಪಡೆದು ಮುಂದುವರೆಸಲು ಸಮ್ಮತಿ ನೀಡಿದ್ದೇವೆ ಅಂದರೆ ಸರಿಯಲ್ಲ. ನಿಪಿ.10 ರಲ್ಲಿ ಪ್ರತಿ ಪುಟಕ್ಕೆ ಮೂಲ ಮಾಲಿಕರು ಹಾಗೂ ಭಾಡಿಗೆದಾರರ ಸಹಿ ಇಲ್ಲ. ನಿಪಿ.10 ರಲ್ಲಿರುವ ಸಾಕ್ಷಿದಾರರು ಮೂಲ ಮಾಲಿಕರ ಪರಿಚಯದವರು ಅಂದರೆ ಗೊತ್ತಿಲ್ಲ. ನಿಪಿ.10 ತಯಾರಿಸಿದ ನಂತರ ಸಹಿ ತೆಗೆದುಕೊಂಡಿಲ್ಲ ಅಂದರೆ ಗೊತ್ತಿಲ್ಲ. ಮೂಲ ಭಾಡಿಗೆದಾರ ಖಾಲಿ ಬಾಂಡ ನ ಮೇಲೆ ಸ ಮಾಡಿದ್ದರ ಮೇಲೆ ಅದನ್ನು ತಯಾರು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಿಪಿ.10 ರಲ್ಲಿ ಪೂರಕ ದಾಖ್ಲೆ ಎಂದು ಬರೆದಿಲ್ಲ ಅಂದರೆ ಸರಿ. 1 ನೇ ವಾದಿ ಜನವರಿ 2023 ರಿಂದ ಏಪ್ರಿಲ್ -2023 ವರೆಗೆ ಹೆಚ್ಚಿನ ಭಾಡಿಗೆ ಹಣ ರೂ. 1 ಲಕ್ಷ 40 ರೂ. ಪೈಕಿ ಅವರ ಪಾಲಿನ ಭಾಡಿಗೆ ಹಣ ಖಾತೆ ಮೂಲಕ ತೆಗೆದುಕೊಂಡಿದ್ದಾರೆ ಅಂದರೆ ಸರಿಯಲ್ಲ.

**O.S. 416-23** **PW : 1**

ದಾವಾ ಆಸ್ತಿಗೆ ಪ್ರತಿವಾದಿ ಒಬ್ಬನೇ ಭಾಡಿಗೆ ಕೊಡುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ ಒಬ್ಬನೇ ಭಾಡಿಗೆ ಕೊಡುತ್ತಾನೆ ಎಂದು ಬ್ಯಾಂಕ ಸ್ಟೇಟಮೊಂಟದಲ್ಲಿ ಇಲ್ಲ.

20. ದಾವಾ ಆಸ್ತಿ ಸಿಟಿ ಎಸ್ ನಂಃ 136/ಬಿ ರಲ್ಲಿರುವುದು ಇವತ್ತಿನ ಬೆಲೆ 7 – 8 ಕೋಟಿ ಇರಬಹುದು. ನಾನು, ನನ್ನ ತಂದೆ, ಸಂಗಪ್ಪ ಹಾಗೂ ಉಳಿದ ವಾದಿಗಳು ಭಾಡಿಗೆ ಮುಂದುವರೆಸುತ್ತೇವೆಂದು ಒಪ್ಪಿಕೊಂಡಿದ್ದರಿಂದ ಹೆಚ್ಚಿನ ಭಾಡಿಗೆಗೆ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಿಡಿ.10 ಹಾಗೂ 11 ನಮ್ಮ ಬಳಿ ಇರಬಹುದು. ಈ ಎರಡು ನೋಟಿಸುಗಳನ್ನು ಕೆಳ ನ್ಯಾಯಾಲಯದಲ್ಲಿ ಹಾಗೂ ಈ ನ್ಯಾಯಾಲಯದಲ್ಲಿ ಹಾಜರಪಡಿಸಿದ್ದು ಗೊತ್ತಿಲ್ಲ. ಅವುಗಳನ್ನು ಹಾಜರಪಡಿಸಲು ನಮಗೆ ತೊಂದರೆ ಇಲ್ಲ ಅಂದರೆ ಗೂತ್ತಿಲ್ಲ. ಈ ಎರಡು ನೋಟಿಸಿನ ಮೇಲೆ ಕಾನೂನು ಕ್ರಮ ಜರುಗಿಸಿಲ್ಲ. ನಮ್ಮ ಮಾತನ್ನು ನಂಬಿ ಮೂಲ ಭಾಡಿಗೆದಾರನ ವಾರಸುದಾರರು ಭಾಡಿಗೆ ಮುಂದುವರೆಸುತ್ತಾರೆಂದು ಹೆಚ್ಚಿನ ಭಾಡಿಗೆ ಹಣ 1 ಲಕ್ಷ 40 ಸಾವಿರ ರೂ. ಖಾತೆ ಮೂಲಕ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಅವರು ತಮ್ಮ ಮಾತನ್ನು ನರವೇರಿಸಿರುತ್ತಾರೆ ಅಂದರೆ ಸರಿಯಲ್ಲ. ನಾವು ಕೆಳ ನ್ಯಾಯಾಲಯದಲ್ಲಿ ಕೇಸ ಚಾಲ್ತಿ ಇದ್ದಾಗ ಭಾಡಿಗೆ ಮುಂದುವರೆಸುತ್ತೇವೆ ಎಂದು ಮೂಲ ಭಾಡಿಗೆ ದಾರನ ವಾರಸುದಾರರಿಂದ ಹಣ ಪಡೆದು ದಾವೆ ಹಿಂದೆ ಪಡೆದಿದ್ದೇವೆ ಅಂದರೆ ಸರಿಯಲ್ಲ. ಅದು ಅಲ್ಲದೇ ಮುಂದಿನ ಭಾಡಿಗೆ ಪತ್ರವನ್ನು ಬರೆದುಕೊಡಲು ದಿನ ಮುಂದೂಡೂತ್ತಾ ಬಂದಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.